# ಕಬಾಬ್ ಪ್ರೀತಿ; ಬೈಕ್ ನಂಟು



ಫ್ರಾನ್ಸ್‌ನಿಂದ ಬಂದ ಕ್ಲೆಮೆಂಟ್ ರಿಬಿಯಾಡ್ (ಚಿತ್ರ: ಎಸ್.ಕೆ. ದಿನೇಶ್)

ವಿದೇಶೀಯರಿಗೆ ಭಾರತಕ್ಕೆ ಬಂದು ನೆಲೆ ನಿಲ್ಲುವುದು, ಇಲ್ಲಿ ಸುತ್ತಾಡುವುದು ಎಂದರೆ ಬಹಳ ಇಷ್ಟ. ಕ್ಲೆಮೆಂಟ್ ರಿಬಿಯಾಡ್ ಫ್ರಾನ್ಸ್‌ನಿಂದ ಬಂದವರು. ವೃತ್ತಿಯ ನಿಮಿತ್ತ ಕ್ಲೆಮೆಂಟ್ ಬೆಂಗಳೂರಿಗೆ ಬಂದರೂ ದೇಶ ವಿದೇಶಗಳನ್ನು ಸುತ್ತುವುದೇ ಇವರ ಕಾಯಕ.

ಖಾಸಗಿ ಕಂಪೆನಿಯೊಂದರಲ್ಲಿ ಮ್ಯಾನೇಜರ್ ಆಗಿರುವ ಕ್ಲೆಮೆಂಟ್, ಮೂರು ವರ್ಷಗಳ ಹಿಂದೆ ಬೆಂಗಳೂರಿಗೆ ಬಂದಿದ್ದರು. ಫ್ರಾನ್ಸ್‌ನ ಲಿಯೋನ್‌ನಲ್ಲಿ ಹುಟ್ಟಿದ ಕ್ಲೆಮೆಂಟ್ ಓದಿನ ಬಳಿಕ ಹೈಸ್ಕೂಲ್ ಒಂದರಲ್ಲಿ ಶಿಕ್ಷಕರಾಗಿ ದುಡಿದವರು. ಅಲ್ಲಿಂದ ಲ್ಯಾಟಿನ್ ಅಮೆರಿಕಕ್ಕೆ ಹೋದ ಅವರು ಕೆಲ ಕಾಲದ ನಂತರ ಪೆರು ಮತ್ತು ಚಿಲಿಯಲ್ಲೂ ಕೆಲಸ ಮಾಡಿದ್ದಾರೆ. ಅದಾಗಿ ಫ್ರಾನ್ಸ್‌ಗೇ ಮರಳಿದ ಇವರು, ಖಾಯಂ ಕೆಲಸಕ್ಕಾಗಿ ಸಾಕಷ್ಟು ಅಲೆದಾಡಿದ್ದಾರೆ. ಮೆಟೀರಿಯಲ್ ಎಂಜಿನಿಯರಿಂಗ್ ಕಲಿತ ಕ್ಲೆಮೆಂಟ್, ಭಾರತದಲ್ಲಿ ವಿಫುಲ ಉದ್ಯೋಗಾವಕಾಶವಿದೆ ಎಂಬುದನ್ನು ಅರಿತುಕೊಂಡು ಇಲ್ಲಿಗೆ ಬಂದಿದ್ದಾರೆ.

‘ಸವಾಲಿನ ಕೆಲಸ’ (ಚಾಲೆಂಜಿಂಗ್ ಜಾಬ್) ಮಾಡುವುದು ನನಗೆ ಯಾವತ್ತೂ ಇಷ್ಟ. ಎಂಥ ಕಷ್ಟದ ಸನ್ನಿವೇಶಗಳಲ್ಲೂ ಅದನ್ನು ಸಮರ್ಥವಾಗಿ ಎದುರಿಸಿ ಕೆಲಸ ಮಾಡಬಲ್ಲೆ ಎಂಬ ನಂಬಿಕೆ ನನ್ನಲ್ಲಿದೆ. ಇದಕ್ಕೆ ಆತ್ಮವಿಶ್ವಾಸ ಬಹಳ ಮುಖ್ಯ’ ಎಂದು ತಾತ್ವಿಕವಾಗಿ ಮಾತನಾಡುತ್ತಾರೆ ಕ್ಲೆಮೆಂಟ್.

‘ಬೆಂಗಳೂರು ನಗರ ವೇಗವಾಗಿ ಬೆಳೆಯುತ್ತಿದೆ. ಉದ್ಯೋಗಾವಕಾಶಗಳೂ ಹೆಚ್ಚುತ್ತಿವೆ. ಒಂದು ಕೆಲಸದಲ್ಲಿ ತೃಪ್ತಿ ಇಲ್ಲ ಎಂದಾದರೆ ಅಥವಾ ಬೇಸರ ಎನಿಸಿದರೆ ಬೇರೆ ಕೆಲಸ ಹುಡುಕಿಕೊಳ್ಳಬಹುದು. ಅನುಭವದ ಜತೆಗೆ ಆಸಕ್ತಿ ಇದ್ದರೆ ಯಾವ ಕೆಲಸವನ್ನಾದರೂ ಮಾಡಿ ಸಂಪಾದಿಸಬಹುದು’ ಎನ್ನುವ ಈ ವಿದೇಶಿಗ ‘ಇಲ್ಲಿ ಯಾವ ಉದ್ಯಮಕ್ಕಾದರೂ ಬಂಡವಾಳ ಹೂಡಿದರೆ ತುಂಬ ಲಾಭವಾಗದಿದ್ದರೂ ನಷ್ಟವಂತೂ ಆಗದು ಎಂಬುದನ್ನು ಮನಗಂಡಿದ್ದೇನೆ. ಕುಟುಂಬ ಸಮೇತ ಇಲ್ಲಿ ಯಾವುದೇ ಕೊರಗುಗಳಿಲ್ಲದೆ ಜೀವನ ನಡೆಸಬಹುದು ಎಂಬ ಭರವಸೆಯೂ ಇದೆ’ ಎನ್ನುತ್ತಾರೆ.

‘ಫ್ರೆಂಚ್ ಸಂಸ್ಕೃತಿ, ಸಂಪ್ರದಾಯ ಬಹಳ ಶ್ರೀಮಂತ ಮತ್ತು ಸಮೃದ್ಧ. ಸಂಗೀತ, ನೃತ್ಯ, ಲಲಿತ ಕಲೆಗಳಿಗೆ ಅಲ್ಲಿ ಬಹಳ ಪ್ರಾಶಸ್ತ್ಯ ನೀಡಲಾಗುತ್ತದೆ. ಇದನ್ನೇ ಇಲ್ಲೂ ಗಮನಿಸಿದ್ದೇನೆ. ಸಂಗೀತ–ನೃತ್ಯದಂತಹ ಲಲಿತಕಲೆ ದೇಶ ವಿದೇಶಗಳ ನಡುವೆ ಸೌಹಾರ್ದ ಸೇತುವೆ ಇದ್ದ ಹಾಗೆ. ಇದು ಬಾಂಧವ್ಯವೃದ್ಧಿಗೆ ಹೇಗೆ ಸಹಕಾರಿಯೋ ಮಾನಸಿಕ ನೆಮ್ಮದಿಗೆ ಕೂಡ ಅಷ್ಟೇ ಪರಿಣಾಮಕಾರಿ’ ಎಂದು ಕಲೆಯ ಬಗ್ಗೆ ವ್ಯಾಖ್ಯಾನ ನೀಡುತ್ತಾರೆ ಇವರು.

ಭೌಗೋಳಿಕ ಪ್ರದೇಶಕ್ಕೆ ತಕ್ಕಂತೆ ಜನರ ನಡವಳಿಕೆಗಳಲ್ಲೂ ವ್ಯತ್ಯಾಸವಾಗುತ್ತದೆ. ಉತ್ತರ ಫ್ರಾನ್ಸ್‌ನ ಜನರಲ್ಲಿ ಮಾತು ಕಡಿಮೆ, ಸಂಕೋಚ ಸ್ವಭಾವದವರು, ಜತೆಗೆ ಅಂತರ್ಮುಖಿಗಳೇ ಹೆಚ್ಚು. ದಕ್ಷಿಣ ಭಾಗದಲ್ಲಿ ಅದೂ ಸ್ಪೈನ್ ಮತ್ತು ಇಟಲಿಗೆ ಸನಿಹದ ಭಾಗಗಳಲ್ಲಿ ಜನ ಬಹಳ ಚಟುವಟಿಕೆಯಿಂದ ಕೂಡಿದ್ದು ಸಂವೇದನಾಶೀಲರಾಗಿರುತ್ತಾರೆ. ಕೆಲಸದಲ್ಲೂ ಬಹಳ ಚುರುಕು ನಡೆಯವರು. ಭಾರತದಲ್ಲೂ ಇದೇ ರೀತಿಯ ಜನರಿದ್ದಾರೆ ಎಂಬುದು ಕ್ಲೆಮೆಂಟ್ ಅಭಿಪ್ರಾಯ.

ಇಲ್ಲಿನ ಆಹಾರ ಸಂಸ್ಕೃತಿ ಬಹಳ ವಿಭಿನ್ನವಂತೆ. ಕ್ಲೆಮೆಂಟ್ ಮಸಾಲೆ ಪದಾರ್ಥಗಳನ್ನು ಇಷ್ಟಪಡದಿದ್ದರೂ ಕಬಾಬ್ ಮತ್ತು ನಾನ್ ಅನ್ನು ಬಹಳ ಪ್ರೀತಿಸುತ್ತಾರಂತೆ. ಉತ್ತರ ಭಾರತ ಶೈಲಿಯ ಅಡುಗೆಗಳನ್ನು ತುಂಬ ಇಷ್ಟಪಡುವ ಇವರಿಗೆ ಇಲ್ಲಿನ ಹೋಟೆಲ್ ಊಟ ತಿಂಡಿಗಳು ಬಹಳ ಹಿಡಿಸಿವೆಯಂತೆ. ಕೋರಮಂಗಲ, ಇಂದಿರಾನಗರಗಳಲ್ಲಿರುವ ವಿದೇಶಿ ಮೂಲದ ಹೋಟೆಲ್‌ಗಳಲ್ಲಿ ತಿಂಡಿ ತಿನ್ನುವುದು ಇಷ್ಟವಂತೆ.

‘ಬೈಕ್‌ನಲ್ಲಿ ಓಡಾಡುವುದೆಂದರೆ ನನಗೆ ಬಹಳ ಪ್ರೀತಿ. ಒಮ್ಮೆ ಬೆಂಗಳೂರಿನಿಂದ ಗೋವಾದವರೆಗೂ ಬೈಕ್‌ನಲ್ಲೇ ಹೋಗಿದ್ದೆ. ರಾಯಲ್ ಎನ್‌ಫೀಲ್ಡ್ ಬೈಕ್‌ನಲ್ಲಿ ಹೋಗುತ್ತಿರುವಾಗ ದಾರಿ ಮಧ್ಯೆ ಬೈಕ್ ಕೆಟ್ಟು ಹೋಯ್ತು. ಹಳ್ಳಿಯ ಜನ ಈ ತರದ ಬೈಕ್ ನೋಡಿಯೇ ಇರಲಿಲ್ಲ. ಬಹಳ ಕುತೂಹಲದಿಂದ ನೋಡಿದರು. ಜತೆಗೆ ರಿಪೇರಿ ಮಾಡಲು ಬಹಳ ಸಹಾಯ ಮಾಡಿದರು. ಇಲ್ಲಿನ ಜನರ ಪ್ರೀತಿ ವಿಶ್ವಾಸ, ಆತ್ಮೀಯ ನಡವಳಿಕೆ ಎಂದೂ ಮರೆಯುವ ಹಾಗಿಲ್ಲ’ ಎನ್ನುತ್ತಾರೆ ಕ್ಲೆಮೆಂಟ್.

★ **ಅವನೀಶ್**